# ಸ್ವಾಮಿ ವಿವೇಕಾನಂದ

teach oneness with the universal." (ನಾನು ನೋಡಿದ್ದು ಕೇವಲ ಒಬ್ಬ ಭಾಷಾ ಶಾಸ್ತ್ರಜ್ಞನನ್ನೋ ವಿದ್ವಾಂಸನನ್ನೋ ಅಲ್ಲ. ಪ್ರತಿದಿನವೂ ಬ್ರಹ್ಮದೊಡನೆ ಐಕ್ಯವನ್ನು ಹೊಂದಲು ಮುಂದು ವರಿಯುತ್ತಿರುವ ಆತ್ಮವನ್ನು, ವಿಶ್ವಾತ್ಮನೊಡನೆ ಐಕ್ಯವನ್ನು ಪಡೆಯಲು ವಿಸ್ತಾರಗೊಳ್ಳುತ್ತಿರುವ ಹೃದಯವನ್ನು ನಾನು ನೋಡಿದೆನು.)

ಭಗವದ್ಗೀತೆಯ ಮತ್ತು ಉಪನಿಷತ್ತುಗಳ ಪರಿಚಯ ಸಾಮಾನ್ಯ ಜನರಿಗೂ ಇರಬಹುದು. ಆದರೆ ಬ್ರಹ್ಮಸೂತ್ರಗಳ ಪರಿಚಯವಿರುವುದು ವಿದ್ವಾಂಸರಿಗೆ ಮಾತ್ರ. ಬ್ರಹ್ಮಸೂತ್ರಗಳ ಸಾರವನ್ನು ತಿಳಿಯಬೇಕಾದರೆ ಅವುಗಳ ಮೇಲೆ ಆಚಾರ್ಯರಿಂದ ರಚಿತವಾದ ಭಾಷ್ಯಗಳ ಅಧ್ಯಯನ ಅನಿವಾರ್ಯ. ಇದೆಲ್ಲವನ್ನೂ ಮಾಡಿ ಆ ಭಾಷ್ಯಗಳ ಪರಸ್ಪರ ತುಲನೆಯನ್ನೂ ಮಾಡಿ, ಇದು ವೇದಾಂತದ ತಿರುಳು ಎಂದು ಸಾರಿದ ಕೀರ್ತಿ ಸ್ವಾಮಿ ವಿವೇಕಾನಂದರಿಗೆ ಸಲ್ಲುತ್ತದೆ.

"There have been various commentaries on the Vedanta. Its doctrines found their final expression in the philosophical aphorisms of Vyasa. This treatise, called the *Uttara Mimamsa*, is the standard authority of Vedantism - nay, is the most authoritative exposition of the Hindu scriptures" (ವೇದಾಂತದ ಮೇಲೆ ಹಲವು ವ್ಯಾಖ್ಯಾನಗಳಿವೆ. ಅದರ ಸಿದ್ಧಾಂತಗಳು ವ್ಯಾಸರು ಬರೆದ ದಾರ್ಶನಿಕ ಸೂತ್ರಗಳಲ್ಲಿ ತಮ್ಮ ಪರಮಾಭಿವ್ಯಕ್ತಿಯನ್ನು ಕಂಡು ಕೊಂಡವು. 'ಉತ್ತರ ಮೀಮಾಂಸಾ' ಎಂದು ಕರೆಯಲ್ಪಡುವ ಈ ಬ್ರಹ್ಮಸೂತ್ರಗ್ರಂಥವು ವೇದಾಂತದರ್ಶನದ ಶ್ರೇಷ್ಠ ಪ್ರಮಾಣಗ್ರಂಥ, ಅಷ್ಟೇ ಅಲ್ಲ, ಹಿಂದೂ ಧಾರ್ಮಿಕ ಗ್ರಂಥಗಳ ಅತ್ಯಂತ ಪ್ರಾಮಾಣಿಕ ವಿವರಣೆ.)

ಭಾರತದೇಶದ ದಾರ್ಶನಿಕ ಪ್ರಪಂಚದಲ್ಲಿ ನಿಕಷಾಯಮಾಣ ವಾದ ದರ್ಶನವೆಂದರೆ ಸಾಂಖ್ಯದರ್ಶನ. ಅದು ಕಪಿಲ ಮಹರ್ಷಿಯ ಪ್ರಾತಿಭಜ್ಯೋತಿ. ಆಚಾರ್ಯ ಶಂಕರರು ತಮ್ಮ ಬ್ರಹ್ಮ ಸೂತ್ರ ಭಾಷ್ಯದಲ್ಲಿ ಸಾಂಖ್ಯವನ್ನು 'ಪ್ರಧಾನಮಲ್ಲ' ಎಂದಿದ್ದಾರೆ. ಅತ್ಯಂತ ಪ್ರಾಚೀನವಾದ ಈ ಸಾಂಖ್ಯದರ್ಶನದ ಅನುಯಾಯಿಗಳು ಭಗವಾನ್ ಗೌತಮ ಬುದ್ಧ ನೊಡನೆಯೂ ವಾದವನ್ನು ಹೂಡಿದ್ದರು ಎಂಬುದು ತ್ರಿಪಿಟಕಗಳಿಂದ ವಿದಿತ ವಾಗುತ್ತದೆ.



ಇಂದು ಸಾಂಖ್ಯಶಾಸ್ತ್ರವನ್ನರಿತು ಅದರ ತತ್ತ್ವಗಳನ್ನು ತಿಳಿಸಿ ಹೇಳಬಲ್ಲ ವಿದ್ವಾಂಸರು ಅತಿ ವಿರಳ. ಸ್ವಾಮಿ ವಿವೇಕಾನಂದರು ತಮ್ಮ ಅಧ್ಯಯನದಿಂದಲೇ ಸಾಂಖ್ಯದರ್ಶನವನ್ನು ಆಮೂಲಾಗ್ರವಾಗಿ ಅರಿತುಕೊಂಡು ಅದರ ಇತಿಮಿತಿಗಳು ಇಷ್ಟೇ ಎಂದು ನಿಖರವಾಗಿ ಹೇಳಬಲ್ಲವರಾಗಿದ್ದರೆಂಬುದು **'ಆಶ್ಚರ್ಯವತ್ ಪಶ್ಯತಿ ಕಶ್ಚಿದೇನಮ್'** ಎಂಬ ಔಪನಿಷದ್‌ವಾಣಿಯನ್ನು ನೆನಪಿಗೆ ತರುತ್ತದೆ. ಸ್ವಾಮೀಜಿಯವರು ಹೇಳುತ್ತಾರೆ :

"The influence of Kapila is everywhere seen throughout the world. Whenever there is a recognized system of thought, there you can trace his influence, even if it be thousands of years back, yet he stands there the shining, glorious, wonderful Kapila." (ಕಪಿಲ ಮಹರ್ಷಿಯ ಪ್ರಭಾವ ಪ್ರಪಂಚದಲ್ಲೆಲ್ಲಾ ಕಂಡುಬರುತ್ತದೆ. ಎಲ್ಲೆಲ್ಲಿ ಗುರುತಿಸಲ್ಪಡಬಹುದಾದ ಚಿಂತನೆಯ ಪ್ರವಾಹವಿದೆಯೋ ಅಲ್ಲೆಲ್ಲ ಕಪಿಲನ ಪ್ರಭಾವವನ್ನು ಕಾಣಬಹುದು. ಅವನು ಇದ್ದುದು ಸಾವಿರಾರು ವರ್ಷಗಳ ಹಿಂದೆ. ಆದರೂ ಅವನು ದೇದೀಪ್ಯಮಾನನಾಗಿ, ಪ್ರಭಾಭಾಸುರನಾಗಿ, ಆಶ್ಚರ್ಯಗೊಳಿಸುವವನಾಗಿ ನಿಂತಿದ್ದಾನೆ.)

ನಿರೀಶ್ವರ ಸಾಂಖ್ಯದರ್ಶನದ ಪ್ರವರ್ತಕನಾಗಿದ್ದ ಕಪಿಲನನ್ನೂ, ದರ್ಶನಚಿಂತನನಿಧಿಗೆ ಆತ ನೀಡಿದ ಕಾಣಿಕೆಗಾಗಿ ಮುಕ್ತಕಂಠದಿಂದ ಹೊಗಳುವ ಸ್ವಾಮಿ ವಿವೇಕಾನಂದರ ಪ್ರತಿಭಾಪ್ರೇಮ ಇಲ್ಲಿ ಸುವ್ಯಕ್ತವಾಗಿದೆ. ಇಂಥ ನಿಷ್ಪಕ್ಷಪಾತ ಧಿಷಣಾಗಾಂಭೀರ್ಯ ಅನ್ಯತ್ರ ಸುದುರ್ಲಭ. ಈ ವಿಷಯದಲ್ಲಿ ಸ್ವಾಮೀಜಿಯವರಿಗೆ ಸ್ವಾಮೀಜಿಯವರೇ ಸಾಟಿ.

ಪತಂಜಲಿಯ ಯೋಗಸೂತ್ರಗಳನ್ನಂತೂ ಸ್ವಾಮಿ ವಿವೇಕಾನಂದರು ಹೃದ್ಗತವನ್ನಾಗಿ ಮಾಡಿಕೊಂಡಿದ್ದರು. ಅದನ್ನು ಅವರು ಅನುವಾದಿಸಿದ್ದಷ್ಟೇ ಅಲ್ಲ, ತಮ್ಮ ಕುಸುಮೋಪಮ ಪದಪುಂಜಗಳಲ್ಲಿ ವಿವರಿಸಿದ್ದಾರೆ. ಧರ್ಮವನ್ನೂ ವೇದಾಂತವನ್ನೂ ಯೋಗವೆಂಬ ವಿಜ್ಞಾನದ ಮೂಲಕ ಜಗತ್ತಿಗೆ ಕೊಡಬೇಕೆನ್ನುವುದು ಸ್ವಾಮೀಜಿ ಅವರ ಆಶಯವಾಗಿತ್ತು. ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ, ರಾಜಯೋಗಗಳನ್ನು ಅರ್ಥಮಾಡಿಕೊಳ್ಳಲು ಸಾಮಾನ್ಯನಿಗೂ ಸುಲಭಸಾಧ್ಯ ಉಪಾಯವೆಂದರೆ ಸ್ವಾಮೀಜಿಯವರ ಕೃತಿಗಳ ಅಧ್ಯಯನ. ಅವುಗಳಲ್ಲಿ ಅವರ ಪ್ರಸನ್ನಗಂಭೀರವಾದ ವೈದುಷ್ಯ ವಿಸ್ತಾರದ ನೋಟವು ಓದುಗರಿಗೆ ಲಭ್ಯವಾಗುತ್ತದೆ.

ಪ್ರಾಚೀನ ಗ್ರಂಥಗಳ ಒಂದೋ ಎರಡೋ ವಾಕ್ಯಗಳನ್ನು ಕಂಠಪಾಠ ಮಾಡಿ ಆಗಾಗ ಭಾಷಣಗಳಲ್ಲಿ ಉದಹರಿಸುವ (ಅಥವಾ ಉದುರಿಸುವ) ತೋರಿಕೆಯ ಪಾಂಡಿತ್ಯ ಬೇರೆ, ಗ್ರಂಥದ ಒಂದೊಂದು ಪದವನ್ನೂ ಕೂಲಂಕಷವಾಗಿ ಪರೀಕ್ಷಿಸಿ, ಅದರ ಅರ್ಥವನ್ನು ಗ್ರಹಿಸಿ, ಸಮಗ್ರ ತತ್ತ್ವಶಾಸ್ತ್ರದ ಹಿನ್ನೆಲೆಯಲ್ಲಿ ಅದರ ಮೇಲೆ ಬೆಳಕನ್ನು ಚೆಲ್ಲುವ ವಿದ್ವತ್ತು ಬೇರೆ. ಸಾಂಖ್ಯದ ತತ್ತ್ವ ಮತ್ತು ಯೋಗದ ಪ್ರಾಯೋಗಿಕ ವಿಧಾನಗಳನ್ನು ಸಮನ್ವಯಗೊಳಿಸಿ, ವೇದಾಂತ ಶಾಸ್ತ್ರದ ಉಪದೇಶದಲ್ಲಿ ಸಾಮರಸ್ಯವನ್ನು ಸಾಧಿಸಿರುವ ಸ್ವಾಮಿ ವಿವೇಕಾನಂದರ ವಿದ್ವತ್ತು, ಹಿಂದೆ ಎಂಟನೆಯ ಶತಮಾನದಲ್ಲಿ ಷಣ್ಮತಗಳ ಮತ್ತು ಷಡ್ದರ್ಶನಗಳ ಸಮನ್ವಯವನ್ನು ಸಾಧಿಸಿದ್ದ ಶಂಕರಾಚಾರ್ಯರ ವಿದ್ವತ್ತಿಗೆ ಕಡಿಮೆಯಲ್ಲ.

ಸ್ವಾಮಿ ವಿವೇಕಾನಂದರ ಭಾಷಾಪ್ರೌಢಿಮೆ ಪ್ರಶಂಸಾರ್ಹ. ಅವರ ಮಾತೃಭಾಷೆ ಬಂಗಾಲಿ. (ವಂಗಭಾಷೆಯಲ್ಲಿ ಹೇಗೋ ಹಾಗೆ ಆಂಗ್ಲಭಾಷೆಯಲ್ಲಿಯೂ ಅವರು ಅಪ್ರತಿಮ ವಾಗ್ಮಿಗಳಾಗಿದ್ದರು.) ಅವರ ಮಾತನ್ನು ಕೇಳಿ ಅಮೆರಿಕ ದೇಶದ ಜನರು ಮಂತ್ರಮುಗ್ಧರಾಗಿದ್ದರು. ವೇದಗಳಿಂದ, ಉಪನಿಷತ್ತುಗಳಿಂದ, ಸಂಸ್ಕೃತ ಕಾವ್ಯಗಳಿಂದ ಮಂತ್ರಗಳನ್ನು, ಶ್ಲೋಕಗಳನ್ನು ಸ್ವಾಮೀಜಿಯವರು ಉದಹರಿಸುತ್ತಿದ್ದರು. ಸಂದರ್ಭ ಒದಗಿದಾಗ ಸಂಸ್ಕೃತ ಪಂಡಿತರೊಡನೆ ದೇವಭಾಷೆಯಲ್ಲೇ ನಿರರ್ಗಳವಾಗಿ ಸಂಭಾಷಣೆಯನ್ನೂ ನಡೆಸುತ್ತಿದ್ದರು. ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರೊಡನೆ ಹೇಗೆ ಗಹನವಿಷಯಗಳನ್ನು ಆಂಗ್ಲಭಾಷೆಯಲ್ಲಿ ಚರ್ಚಿಸುತ್ತಿದ್ದರೋ, ಹಾಗೆ ವಾರಾಣಸಿಯ ಪಂಡಿತಮಂಡಲಿಯಲ್ಲೂ ಸಂಸ್ಕೃತದಲ್ಲಿ ಶಾಸ್ತ್ರಾರ್ಥಗಳನ್ನು ಚರ್ಚಿಸಲು ಸ್ವಾಮೀಜಿ ಸಮರ್ಥರಾಗಿದ್ದರು. ಆದ್ದರಿಂದಲೇ ಅವರಿಗೆ ವಿಶ್ವದಲ್ಲಿ ಎಲ್ಲೆಲ್ಲೂ ಮನ್ನಣೆ ದೊರಕಿತ್ತು.

**ಸ್ವಗೃಹೇ ಪೂಜ್ಯತೇ ಮೂರ್ಖಃ ಸ್ವಗ್ರಾಮೇ ಪೂಜ್ಯತೇ ಪ್ರಭುಃ ।**
**ಸ್ವದೇಶೇ ಪೂಜ್ಯತೇ ರಾಜಾ ವಿದ್ವಾನ್ ಸರ್ವತ್ರ ಪೂಜ್ಯತೇ ॥**

"ಮೂರ್ಖನಿಗೆ ತನ್ನ ಮನೆಯಲ್ಲಿ ಮಾತ್ರ ಮರ್ಯಾದೆ. ಪಟೇಲನಿಗೆ ತನ್ನ ಹಳ್ಳಿಯಲ್ಲಿ ಮಾತ್ರ ಗೌರವ. ರಾಜನಿಗೆ ಅಗ್ರಪೂಜೆ ತನ್ನ ದೇಶದಲ್ಲಿ. ವಿದ್ವಾಂಸನಿಗೆ ಎಲ್ಲೆಲ್ಲೂ ಮನ್ನಣೆ."

ಸ್ವಾಮಿ ವಿವೇಕಾನಂದರ ವಿದ್ವತ್ತಿಗೆ, ಮಾನವ ಪ್ರೇಮಕ್ಕೆ ಸಾಕ್ಷಿಯಾಗಿರುವುದು ಅವರೇ ಅನುಗ್ರಹಿಸಿರುವ ಧ್ಯೇಯವಾಕ್ಯ **'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'**. ಇದು ವ್ಯಷ್ಟಿ – ಸಮಷ್ಟಿಗಳ ಸಮನ್ವಯ ಸಂದೇಶ, ಜ್ಞಾನಯೋಗ – ಕರ್ಮಯೋಗಗಳ ಸಂಗಮ ಸಾಧನ. ಜ್ಞಾನಯೋಗ ಮೋಕ್ಷದ ಮಾರ್ಗ, ಕರ್ಮಯೋಗದಿಂದ ಲೋಕದ ಹಿತಸಾಧನೆ.

ಇಂಥ ವಿದ್ವನ್ಮೂರ್ಧನ್ಯರಿಗೆ, ಧನ್ಯಾತ್ಮರಿಗೆ ನಾವು ಹೇಳಬಹುದಾದುದು ಒಂದೇ ಮಾತು –**'ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ'** – "ಮತ್ತೆ ಮತ್ತೆ ನಮಸ್ಕಾರಗಳು"

**ಆತ್ಮಶ್ರದ್ಧೆ ಎನ್ನುವುದು ನಮಗೆ ಬಹಳ ದೊಡ್ಡ ಸಹಾಯಕವಾಗುತ್ತದೆ. ಮಾನವಜನಾಂಗದ ಇತಿಹಾಸದುದ್ದಕ್ಕೂ ಮಹಾನ್ ಪುರುಷರ ಮತ್ತು ಸ್ತ್ರೀಯರ ಜೀವನದಲ್ಲಿ ಕಂಡುಬರುವ ಪರಿಣಾಮಕಾರಿ ಪ್ರಚೋದನಾಶಕ್ತಿಯೆಂದರೆ ಈ ಆತ್ಮಶ್ರದ್ಧೆಯೇ ಆಗಿದೆ.**

**ಉಪನಿಷತ್ತುಗಳಿಗೆ ವಾಪಸ್ಸು ಹೋಗಿ. ಅವುಗಳಲ್ಲಿ ಬೆಳಕು ಬೀರುವ, ಶಕ್ತಿದಾಯಕವಾದ, ಜ್ಯೋತಿರ್ಮಯವಾದ ತತ್ತ್ವಶಾಸ್ತ್ರವಿದೆ. ಹಾಗೂ ಎಲ್ಲ ಬಗೆಯ ರಹಸ್ಯ ಸಂಗತಿಗಳಿಂದ, ಎಲ್ಲ ಬಗೆಯ ದೌರ್ಬಲ್ಯಗಳಿಂದ ಬಿಡಿಸಿಕೊಳ್ಳಿ.**

**ಯೋಗ ಸಿದ್ಧಾಂತದಲ್ಲಿ ರಹಸ್ಯವೂ, ಗೂಢವೂ ಆದ ಎಲ್ಲವನ್ನೂ ಒಡನೆ ತ್ಯಜಿಸಿಬಿಡಬೇಕು. ಜೀವನದ ಶ್ರೇಷ್ಠವಾದ ಮಾರ್ಗದರ್ಶಕನೆಂದರೆ, ಶಕ್ತಿಯೇ.** – *ಸ್ವಾಮಿ ವಿವೇಕಾನಂದ*